**ಓ. ಎಸ್ .:248/18**
**ಪಿ. ಡಬ್ಲ್ಯೂ:1**

ದಿನಾಂಕಃ 30-11-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಶ್ರೀ. ಎಸ್ ಬಿ ಎಚ್ ರವರಿಂದಃ

ನನ್ನ ತಂದೆ ಮಾತ್ರ ವಿಧ್ಯಾವಂತನಿದ್ದು, ಆತನ ಸಹೋದರರು ಅವಿಧ್ಯಾವಂತನಿರುತ್ತಾರೆ ಎಂದರೆ ಸರಿಯಿಲ್ಲ. ನನ್ನ ತಂದೆಯ ಸಹೋದರರು ಎಷ್ಟು ವಿಧ್ಯಾಭ್ಯಾಸ ಮಾಡಿರುತ್ತಾರೆಂದು ಗೊತ್ತಿಲ್ಲ. ನನ್ನ ತಂದೆಯ ಸಹೋದರರು ವಿಧ್ಯಾವಂತರೆಂದು ತೋರಿಸಲು ಶಾಲಾ ದಾಖಲಾತಿಯನ್ನು ಹಾಜರಿಸಲು ಆಗುವುದಿಲ್ಲ. ನನ್ನ ತಂದೆ ಈ ದಾವೆಯಲ್ಲಿ ಏನು ಪ್ರತಿವಾದಿ ಪತ್ರ ಸಲ್ಲಿಸಿರುತ್ತಾರೆಂದು ನಾನು ನೋಡಿರುವುದಿಲ್ಲ ಮತ್ತು ವಕೀಲರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ತಂದೆಗೆ ಆತನ ಸಹೋದರರು ಜೀವ ಬೇದರಿಕೆ ಹಾಕಿರುತ್ತಾರೆಂದು ಯಾವ ಆಧಾರದ ಮೇಲೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುತ್ತೀಯಾ ಎಂದರೆ ಸಾಕ್ಷಿ ಆ ಬಗ್ಗೆ ಪೋಲಿಸ್ ಕಂಪ್ಲೇಂಟ ಆಗಿತ್ತು, ಅದರ ಬಗ್ಗೆ ಬರೆದಿದ್ದೆ ಎನ್ನುತ್ತಾರೆ. ನನ್ನ ತಂದೆಗೆ ಆತನ ಸಹೋದರರು ಜೀವ ಬೇದರಿಕೆ ಹಾಕಿರುತ್ತಾರೆಂದು ದೂರು ದಾಖಲಾಗಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆಗೆ ಆತನ ಸಹೋದರರು ಜೀವ ಬೇದರಿಕೆ ಹಾಕಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಹಾಕುವ ಕಾಲಕ್ಕೆ ನನ್ನ ಮತ್ತು ಪ್ರತಿವಾದಿಗಳ ಮಧ್ಯೆ ಅವಿಭಕ್ತ ಕುಟುಂಬ ಅಸ್ತಿತ್ವದಲ್ಲಿರಲಿಲ್ಲ ಮತ್ತು ದಾವಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ